# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಬಿ.ಸಿ.ಡಿ–2164/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 23/09/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ದೊಡ್ಡಬೊಮ್ಮಸಂದ್ರ ಗ್ರಾಮದ ಸರ್ವೆ ನಂ. 3 ರಲ್ಲಿರುವ 0.15 ಗುಂಟೆ ಸರ್ಕಾರಿ ಗುಂಡುತೋಪು ಜಮೀನಿನಲ್ಲಿ 0–4.12 ಗುಂಟೆ ಜಮೀನು ಒತ್ತುವರಿಯಾಗಿದ್ದು ನಿಯಮಾನುಸಾರ ಕ್ರಮ ಜರುಗಿಸಿ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ಜಾಗವನ್ನು ಸರ್ಕಾರದ ವಶಕ್ಕೆ ಪಡೆಯುವ ಕುರಿತು ವರದಿ.

*****

1. ತಹಶೀಲ್ದಾರರು, ಬೆಂಗಳೂರು ದಕ್ಷಿಣ ಹೆಚ್ಚುವರಿ ತಾಲ್ಲೂಕು, ಬೆಂಗಳೂರು ಉತ್ತರ ತಾಲ್ಲೂಕು ಕಛೇರಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಜಿಲ್ಲೆ ಇವರ ವಿರುದ್ಧ ಸ್ವದೂರು ದಾಖಲಾಗಿರುತ್ತದೆ. (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ).

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:

ವಿದ್ಯಾರಣ್ಯಪುರ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ದೊಡ್ಡಬೊಮ್ಮಸಂದ್ರ ಪ್ರದೇಶದ ವಾರ್ಡ್ ನಂ. 10 ರಲ್ಲಿನ ಸರ್ವೆ ನಂ. 45 ರಲ್ಲಿ 16 ಗುಂಟೆ ಸ್ಮಶಾನದ ಜಾಗ ಹಾಗೂ ಸರ್ವೆ ನಂ. 3 ರಲ್ಲಿನ 15 ಗುಂಟೆ ಗುಂಡುತೋಪು ಪ್ರದೇಶದ ಜಾಗವನ್ನು ಖಾಸಗಿ ಸ್ವತ್ತಿನ ಮಾಲೀಕರು ಒತ್ತುವರಿ ಮಾಡಿಕೊಂಡಿರುತ್ತಾರೆ. ಸದರಿ ಜಮೀನುಗಳ ವಿಸ್ತೀರ್ಣ ಹಾಲಿ ನಿಜ ಸ್ಥಿತಿಗಿಂತ ಕಡಿಮೆ

ಇರುತ್ತದೆ. ಸದರಿ ಸರ್ಕಾರಿ ಜಮೀನುಗಳ ಒತ್ತುವರಿ ಪ್ರದೇಶವನ್ನು ತೆರವುಗೊಳಿಸಲು ಹಾಗೂ ಸರ್ಕಾರದ ಸ್ವತ್ತನ್ನು ಸಂರಕ್ಷಿಸುವ ಉದ್ದೇಶದಿಂದ ಸ್ವ ದೂರು ದಾಖಲಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ.

3. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ. ಬೆಂಗಳೂರು-92 ಇವರು ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರಿಗೆ ಮನವಿ ಸಲ್ಲಿಸಿ ಸರ್ವೆ ನಂ. 3 ಮತ್ತು 45 ಜಮೀನುಗಳ ಪ್ರದೇಶವನ್ನು ಸರ್ವೆ ಮಾಡಿಸಿ ಗಡಿ ಗುರ್ತಿಸಿಕೊಡಲು ಕೋರಿರುತ್ತಾರೆ. ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯಾರಣ್ಯಪುರ ಉಪವಿಭಾಗ ಇವರಿಗೆ ಮನವಿ ಸಲ್ಲಿಸಿ ಸ್ಥಳ ತನಿಖೆ ಮಾಡಿ ವರದಿ ನೀಡಲು ಸೂಚಿಸಿರುತ್ತಾರೆ.

4. ದಿನಾಂಕ: 16/10/2015 ರಂದು ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳು:-

ದೊಡ್ಡಬೊಮ್ಮಸಂದ್ರ ಗ್ರಾಮದ ಸರ್ವೆ ನಂ. 3 ಮತ್ತು 45 ರಲ್ಲಿನ ಸರ್ಕಾರಿ ಜಮೀನುಗಳ ಬಗ್ಗೆ ತಾಲ್ಲೂಕು ಭೂಮಾಪಕರಿಂದ ವರದಿ ಮತ್ತು ನಕ್ಷೆ ಪಡೆಯಲಾಗಿದೆ. ದೊಡ್ಡಬೊಮ್ಮಸಂದ್ರ ಗ್ರಾಮದ ರೀ ಸರ್ವೆ ನಂ. 3 ರ ಜಮೀನು ಆಕಾರ್ ಬಂದ್ ನಂತೆ 0-15 ಗುಂಡೆ ಇದ್ದು, ಪೂರಾ 0-15 ಗುಂಟೆ ಜಮೀನು ಖರಾಬು ಜಮೀನಾಗಿದ್ದು, ಪಹಣಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಸದರಿ ಜಮೀನಿನ ಬ್ಲಾಕ್ 1 ರಲ್ಲಿ 0-02ಗುಂಟೆ, ಬ್ಲಾಕ್ 2 ರಲ್ಲಿ 0-02.04 ಗುಂಟೆ, ಬ್ಲಾಕ್ 3 ರಲ್ಲಿ 0-00.08 ಗುಂಟೆ ಜಮೀನು ಒತ್ತುವರಿಯಾಗಿದ್ದು, ಈ ಒತ್ತುವರಿಯಾಗಿರುವ ಜಮೀನುಗಳಲ್ಲಿ ವಾಸದ ಮನೆಗಳು ಹಾಗು ರಸ್ತೆಗಳು ನಿರ್ಮಾಣವಾಗಿರುತ್ತವೆ. ದೊಡ್ಡಬೊಮ್ಮಸಂದ್ರ ಗ್ರಾಮದ ರೀ ಸರ್ವೆ ನಂ. 45 ರ ಜಮೀನು ಆಕಾರ್ ಬಂದ್ ನಂತೆ 0-16 ಗುಂಟೆ ಇದ್ದು, ಪೂರಾ 0-16 ಗುಂಟೆ ಜಮೀನು ಖರಾಬು ಜಮೀನಾಗಿದ್ದು, ಪಹಣಿಗಳಂತೆ ಸರ್ಕಾರಿ ಸ್ಮಶಾನದ ಜಮೀನಾಗಿರುತ್ತದೆ. ಸದರಿ ಜಮೀನಿನ ಬ್ಲಾಕ್ 1 ರಲ್ಲಿ 0-01.04 ಗುಂಟೆ, ಬ್ಲಾಕ್ 2 ರಲ್ಲಿ 0-00.04 ಗುಂಟೆ ಜಮೀನು ಒತ್ತುವರಿಯಾಗಿದ್ದು, ಈ ಒತ್ತುವರಿಯಾಗಿರುವ ಜಮೀನುಗಳಲ್ಲಿ ವಾಸದ ಮನೆ, ಶೆಡ್ ಹಾಗು ಪ್ಯಾಸೇಜ್ ಇರುತ್ತದೆಂದು ನಕ್ಷೆಯೊಂದಿಗೆ ವರದಿಸಿರುತ್ತಾರೆ.

ಸದರಿ ಜಮೀನುಗಳಲ್ಲಿನ ಒತ್ತುವರಿದಾರರಿಗೆ ನೋಟೀಸ್ ಜಾರಿ ಮಾಡಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗುವುದು ಎಂದು ನಮೂದಿಸಿರುತ್ತಾರೆ.

5. ಎದುರುದಾರರು ತಾಲ್ಲೂಕು ಭೂಮಾಪಕರ ವರದಿ ಮತ್ತು ನಕ್ಷೆ ದಾಖಲೆಗಳನ್ನು ಸಲ್ಲಿಸಿರುತ್ತಾರೆ. 2014–15 ನೇ ಸಾಲಿನ ಸರ್ವೆ ನಂ. 45 ಜಮೀನಿನ ಆರ್.ಟಿ.ಸಿ. ಪ್ರತಿ ಲಗತ್ತಿಸಿದ್ದು ಕಾಲಂ 9 ಮತ್ತು 12 ರಲ್ಲಿ ಸರ್ಕಾರಿ ಸ್ಮಶಾನ 0.16 ಗುಂಟೆ ಜಾಗ ಎಂದು ದಾಖಲಿಸಿರುವುದು ಕಂಡುಬಂದಿರುತ್ತದೆ. ಹಾಗೂ ಸರ್ವೆ ನಂ. 3 ರ 2014–15 ಆರ್.ಟಿ.ಸಿ. ಪ್ರತಿಯಲ್ಲಿ ಸರ್ಕಾರಿ ತೋಪು ಎಂದು ವಿಸ್ತೀರ್ಣ 0.15 ಗುಂಟೆ ಎಂದು ದಾಖಲಿಸಿರುವುದು ಕಂಡುಬಂದಿರುತ್ತದೆ. ಎರಡು ಸರ್ವೆ ನಂ. ಗಳ ನಕ್ಷೆ ಪ್ರತಿಯನ್ನು ಭೂ ಮಾಪಕರು ದಿನಾಂಕ: 16/10/2015 ರಂದು ತಯಾರಿಸಿದ್ದು ಒತ್ತುವರಿ ಜಾಗವನ್ನು ಗುರ್ತಿಸಿರುತ್ತಾರೆ.

6. ಹೆಚ್.ಎನ್. ರಮೇಶ್, ವಕೀಲರು ಇವರು ನೀಡಿದ ಮಾಹಿತಿಯ ಆಧಾರದ ಮೇಲೆ ಸ್ವ ದೂರು ದಾಖಲಿಸಿದ್ದು ಸದರಿಯವರಿಗೆ ಪ್ರತ್ಯುತ್ತರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

7.ಹೆಚ್. ಎನ್. ರಮೇಶ್ ರವರ ಪ್ರತ್ಯುತ್ತರ:–

ತಹಶೀಲ್ದಾರರ ವರದಿ ದಿನಾಂಕ: 16/10/2015 ರ ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯಿದೆ ಕಾಲಂ 49 ಎಫ್ ರೀತ್ಯಾ ತಕರಾರು ಹಾಗೂ ಮೇಲ್ಮನವಿ ಎಂದು ಈ ಸಂಸ್ಥೆಗೆ ಸಲ್ಲಿಸಿರುತ್ತಾರೆ. ಗ್ರಾಮ ನಕಾಶೆ ರೀತ್ಯಾ ತಹಶೀಲ್ದಾರರು ಸದರಿ ಸರ್ವೆ ನಂ. ಗಳ ಗಡಿಗುರ್ತುಗಳನ್ನು ನಮೂದಿಸಿರುವುದಿಲ್ಲ. 1889 ರ ಮೂಲ ಟಿಪ್ಪಣಿಗಳನ್ನು ಪರಿಗಣಿಸದೆ ನಿಯಮಬಾಹಿರವಾಗಿ ವರದಿ ಸಲ್ಲಿಸಿರುತ್ತಾರೆ. ಸರ್ವೆ ನಂ. 3 ಮತ್ತು 45 ರ ಗಡಿಗುರ್ತು ನಿಗದಿ ಪಡಿಸುವ ಪೂರ್ವದಲ್ಲಿ ಸರ್ವೆ ನಂ. 2 ಜಮೀನಿನ ಗಡಿಗುರ್ತು ನಿಗದಿ ಪಡಿಸಬೇಕಿದ್ದು ಎದುರುದಾರರು ಸೂಕ್ತ ಕ್ರಮ ಜರುಗಿಸಿರುವುದಿಲ್ಲ. ಸೂಕ್ತ ರೀತಿಯಲ್ಲಿ ಕ್ರಮ ಜರುಗಿಸಿ ನಿಯಮಾನುಸಾರ ಗಡಿಗುರ್ತುಗಳನ್ನು ಮಾಡುವಂತೆ ಎದುರುದಾರರಿಗೆ ನಿರ್ದೇಶಿಸಬೇಕೆಂದು ನಮೂದಿಸಿರುತ್ತಾರೆ.

8. ದಿನಾಂಕ: 22/03/2017 ರ ತಹಶೀಲ್ದಾರರ ವರದಿಯ ಅಂಶಗಳು:–

ದೊಡ್ಡಬೊಮ್ಮಸಂದ್ರ ಗ್ರಾಮದ ಸರ್ವೆ ನಂ. 3 ರಲ್ಲಿ 0–15 ಗುಂಟೆ ಸರ್ಕಾರಿ ಗುಂಡುತೋಪು ಜಮೀನಾಗಿದ್ದು, ಸದರಿ ಜಮೀನಿನಲ್ಲಿ ಒತ್ತುವರಿ ಕುರಿತು ಈಗಾಗಲೇ ಅಳತೆ

ಮಾಡಿ ಸ್ಕೆಚ್ ತಯಾರಿಸಲಾಗಿದ್ದು ಈ ಪೈಕಿ 0–4.12 ಗುಂಟೆ ಒತ್ತುವರಿಯಾಗಿರುತ್ತದೆ. ಉಳಿಕೆ 0.10.04 ಗುಂಟೆ ಜಮೀನನ್ನು ಒತ್ತುವರಿ ತೆರವುಗೊಳಿಸಿ ತಂತಿ ಬೇಲಿ ನಿರ್ಮಿಸಲಾಗಿರುತ್ತದೆ. ಸದರಿ 0–4.12 ಗುಂಟೆ ಪ್ರದೇಶದಲ್ಲಿ ವಾಸದ ಮನೆ ಹಾಗೂ ರಸ್ತೆ ಇರುತ್ತದೆ. ತಹಶೀಲ್ದಾರ್ ರವರ ಕಛೇರಿಯಲ್ಲಿ ಎಲ್.ಎನ್.ಡಿ. (ಎನ್.ಎ)ಸಿ.ಆರ್. 17/14–15 ರಂತೆ ಪ್ರಕರಣ ಜಾರಿಯಲ್ಲಿರುತ್ತದೆ. ಹಾಗೂ ಹಾಲಿ ಸ್ಥಳ ತನಿಖೆ ಮಾಡಲಾಗಿ ಸದರಿ ಜಮೀನಿನಲ್ಲಿ ಸುಮಾರು 15 ವರ್ಷಗಳ ಹಿಂದೆಯೇ ಮನೆಗಳು ನಿರ್ಮಾಣಗೊಂಡಿದ್ದು, ಕಛೇರಿಯಲ್ಲಿ ಪ್ರಕರಣ ಚಾಲ್ತಿಯಲ್ಲಿರುವುದರಿಂದ ಪ್ರಕರಣ ಇತ್ಯರ್ಥಮಾಡಿದ ನಂತರ 0–4.12 ಗುಂಟೆ ಒತ್ತುವರಿಯನ್ನು ತೆರವುಗೊಳಿಸುವ ಕ್ರಮ ಕೈಗೊಳ್ಳಲಾಗುವುದು.

ದೊಡ್ಡಬೊಮ್ಮಸಂದ್ರ ಗ್ರಾಮದ ಸರ್ವೆ ನಂ. 45 ರಲ್ಲಿ 0–16 ಗುಂಟೆ ಸ್ಮಶಾನ ಜಮೀನಿದ್ದು ದಿನಾಂಕ: 21/03/2017 ರಂದು ಸದರಿ ಸರ್ವೆ ನಂಬರಿನಲ್ಲಿರುವ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ ಎಂದು ನಮುದಿಸಿರುತ್ತಾರೆ.

9. ತಹಶೀಲ್ದಾರರು ತಂತಿ ಬೇಲಿ ನಿರ್ಮಿಸಿದ್ದನ್ನು ತೋರಿಸಲು ಸ್ಥಳದ ಭಾವಚಿತ್ರಗಳನ್ನು ಲಗತ್ತಿಸಿರುತ್ತಾರೆ.

10. ತಹಶೀಲ್ದಾರರು ಸಲ್ಲಿಸಿರುವ ವರದಿಯ ಆಧಾರಗಳಿಂದ ಸರ್ವೆ ನಂ. 3 ರಲ್ಲಿರುವ 0.15 ಗುಂಟೆ ಸರ್ಕಾರಿ ಗುಂಡುತೋಪು ಜಮೀನಿನಲ್ಲಿ 0–4.12 ಗುಂಟೆ ಜಮೀನು ಒತ್ತುವರಿಯಾಗಿದ್ದು ತೆರವುಗೊಳಿಸದಿರುವುದು ಸ್ಪಷ್ಟವಾಗಿರುತ್ತದೆ. ಒತ್ತುವರಿಯನ್ನು ತೆರವುಗೊಳಿಸಲು ಎಲ್.ಎನ್.ಡಿ. (ಎನ್.ಎ.) ಸಿ.ಆರ್. 17/14–15 ಪ್ರಕರಣ ದಾಖಲಿಸಿರುವುದಾಗಿ ನಮೂದಿಸಿರುತ್ತಾರೆ.

ತಹಶೀಲ್ದಾರರು ಸದರಿ ಒತ್ತುವರಿಯನ್ನು ತೆರವುಗೊಳಿಸಿದ ಬಗ್ಗೆ, ಸದರಿ ಪ್ರಕರಣವನ್ನು ಇತ್ಯರ್ಥಗೊಳಿಸಿದ ಬಗ್ಗೆ ಮುಂದುವರಿದ ವರದಿಯನ್ನು ಸಲ್ಲಿಸಿರುವುದಿಲ್ಲ. ಕಾರಣ, ಸದರಿ 0–4.12 ಗುಂಟೆ ಸರ್ಕಾರಿ ಜಾಗವನ್ನು ನಿಯಮಾನುಸಾರ ಕ್ರಮ ಜರುಗಿಸಿ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯುವುದು ಅವಶ್ಯಕವಾಗಿರುತ್ತದೆ.

11. ಮೇಲೆ ನಮೂದಿಸಿದ ಕಾರಣಗಳಿಂದ ಹಾಗೂ ಕಡತದಲ್ಲಿನ ಆಧಾರಗಳಿಂದ, ದೊಡ್ಡಬೊಮ್ಮಸಂದ್ರ ಗ್ರಾಮದ ಸರ್ವೆ ನಂ. 3 ರಲ್ಲಿರುವ 0.15 ಗುಂಟೆ ಸರ್ಕಾರಿ ಗುಂಡುತೋಪು ಜಮೀನಿನಲ್ಲಿ 0–4.12 ಗುಂಟೆ ಜಮೀನು ಒತ್ತುವರಿಯಾಗಿದ್ದು ನಿಯಮಾನುಸಾರ ಕ್ರಮ ಜರುಗಿಸಿ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯುವ ಕುರಿತು ಅಗತ್ಯ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**